ಇದ್ದುಕೊಂಡು ಸನಿಹದ ಅಧ್ಯಯನ ನಡೆಸಿದ್ದಾನೆ. ಜಟಾಜೂಟೆಯರಂತೆ ಕೂದಲು ಬಿಟ್ಟುಕೊಂಡು, ಗಾಳಿಯಲ್ಲಿ ಹಾರಾಡುವ ಕೂದಲುಗಳಿಗಿಂತ ವೇಗವಾಗಿ ಓಡಾಡುವ, ಎಂಥ ದೊಡ್ಡ ಗಂಡಸರ ಎದುರಾದರೂ ಕಾಲೂರಿ ನಿಂತು ಗಟ್ಟಿಯಾಗಿ ಮಾತುಗಳನ್ನಾಡುತ್ತಾ, ಯಾರ, ಯಾವ ಎಗ್ಗೂ ಇಲ್ಲದೆ ಕೆಲಸ, ಕಾರ್ಯ, ಅನ್ನ, ಪಾನ, ನಗು, ನಿರ್ಲಿಪ್ತತೆಗಳಲ್ಲಿ ತಮ್ಮನ್ನಷ್ಟೇ ಅಚ್ಚೊತ್ತಿಕೊಳ್ಳುವ ಹುಡುಗಿಯರೆಂದರೆ ಅವನಿಗೆ ಅಲರ್ಜಿ. ಅವನ ದೃಷ್ಟಿಯಲ್ಲಿ ಅವರೆಲ್ಲ ಮಾಯಾಕನ್ನಿಕೆಯರು. ಮಡದಿಯರಾಗಲು ಬೇಕಾದ ಯಾವ ಗುಣಗಳೂ ಅವರಲ್ಲಿಲ್ಲ. ತಾನೇ ಕೈತುಂಬಾ ದುಡಿಯುತ್ತಾನೆ. ಎಲ್ಲವೂ ಬೇಕಾದಂತೆ ಇದೆ. ಬೇಕಾಗಿರುವುದು ಮನ ಮನೆಗಳನ್ನು ಬೆಳಗಬಲ್ಲ ಮಡದಿ ಮಾತ್ರ.

ಏಳೇಳು ಜನ್ಮಗಳ ಪುಣ್ಯ! ಅವನು ಬಯಸುವಂತಹ ರೀತಿಯ ಹುಡುಗಿಯೇ ಮಡದಿಯಾಗಿ ಬಂದಳು. ಹಾಲುಬಿಳುಪಿನ, ಉದ್ದಜಡೆಯ, ಮೃದುಭಾಷಿ, ನೀರೊಳಗೆ ವೀಣೆ ಮಿಡಿವಂತೆ ಮಾತನಾಡುವವಳು. ಬಿ.ಎ. ಪದವಿಯನ್ನೂ ಪೂರೈಸದವಳು. ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು ಇಚ್ಛೆಯನ್ನರಿತು ನಡೆವ ಸತಿ! ಸ್ವರ್ಗಕ್ಕೆ ಕಿಚ್ಚು ಹಚ್ಚೆನ್ನುವ ಸ್ಥಿತಿ.

ಬೇಕಾದ್ದೆಲ್ಲ ಪೂರೈಸಿ ಕೈತುಂಬಾ ಉಳಿಯುವ ಸಂಬಳ! ವಾರಾಂತ್ಯದ ಓಡಾಟಗಳು ಲಗುಬಗೆಯಿಂದಲೇ ನಡೆಯುತ್ತಿದ್ದವು. ಅಪ್ಪ, ಅಮ್ಮ, ಮಗ, ಸೊಸೆ ಐಷಾರಾಮಿ ಕಾರಿನಲ್ಲಿಯೇ ಓಡಾಡುತ್ತಿದ್ದರು. ಆ ವಾರ ಅಮ್ಮನಿಗೆ ಮಂಡಿನೋವು ಬಂದಿತ್ತು. ''ನೀವಿಬ್ರೇ ಹೋಗಿದ್ದು ಬಂದು ಬಿಡಿ. ಮುಂದಿನ ವಾರಕ್ಕೆ ರೆಡಿಯಾಗಿಬಿಡ್ತೀನಿ.'' ಅಪ್ಪಅಮ್ಮನನ್ನು ಮನೆಯಲ್ಲಿಯೇ ಬಿಟ್ಟು ಹತ್ತಿರದ ರೆಸಾರ್ಟಿಗೆ ಹೆಂಡತಿಯೊಡನೆ ಬಂದಿದ್ದ. ರೂಮು ಸೇರಿ ಫ್ರೆಶಪ್ ಆಗಿ ರೂಂಬಾಯ್ ತಂದಿಟ್ಟ ತಿಂಡಿ, ತೀರ್ಥಗಳನ್ನು ಪೂರೈಸಿ, ಹೊರಗಿನ ಸುತ್ತಾಟಕ್ಕೆ ಬಂದಿದ್ದರು.

ಅಪ್ಪಅಮ್ಮ ಜೊತೆಯಲ್ಲಿಲ್ಲವೆಂದು ಮಡದಿಗೆ ಡ್ರೆಸ್ ಧರಿಸಲು ಅವಕಾಶ ಕೊಟ್ಟಿದ್ದನಾತ. ಡ್ರೆಸ್ಸಿಗೆ ತಕ್ಕಂತೆ ಕೂದಲನ್ನು ಕೊಂಚ ಸಡಿಲವಾಗಿ ಹೆಣೆದಿದ್ದಳು ಅವಳು. ಹಣೆ, ಕಿವಿ, ಕುತ್ತಿಗೆಗಳ ಬಳಿ ಒಂದಷ್ಟು ಕೂದಲುಗಳು ಹಾರಾಡುತ್ತಿದ್ದವು. ಅವನ ಕಣ್ಣಿಗೆ ಮಡದಿ ಇಮ್ಮಡಿ ಮುದ್ದಾಗಿ ಕಾಣಿಸಿಕೊಂಡಿದ್ದಳು. ಕೈ ಕೈ ಹಿಡಿದು ಅವರ ಸುತ್ತಾಟ ಆರಂಭವಾಗಿತ್ತು. ನಕ್ಕು, ನಲಿದು ನೆಮ್ಮದಿ ಕಂಡಿದ್ದರು. ಸಮಯದ ಪರಿವೇ ಇಲ್ಲದಂತೆ ಇದ್ದವರಿಗೆ ಕೆಂಪಾಗುತ್ತಿದ್ದ ಸೂರ್ಯ ಎಚ್ಚರಿಸಿದ್ದ. ಕತ್ತಲಾಗಿಬಿಡುವ ಆತಂಕದಲ್ಲಿ ಅವರು ಲಗುಬಗೆಯಿಂದ ರೆಸಾರ್ಟಿನತ್ತ ಹೊರಟಿದ್ದರು.

ಅಲ್ಲಿಯ ತನಕ ಹಚ್ಚಹಸುರಿನ ವಾತಾವರಣದಲ್ಲಿ ಹಕ್ಕಿಗಳ ಉಲಿತವಷ್ಟೇ ಪರಮಸತ್ಯ ಎಂದು ಅಂದುಕೊಂಡಿದ್ದ ಅವರಿಗೆ, ಅದು ಅವರ ಭ್ರಮೆ ಎಂದು ಅಣಕಿಸುವಂತೆ ನಾಲ್ಕೈದು ಜನರಿದ್ದ ಹುಡುಗರ ದಂಡೊಂದು ಅವರ ಹಿಂದಿನಿಂದ ಕಾಣಿಸಿಕೊಂಡಿತ್ತು. ಚಿತ್ರ ವಿಚಿತ್ರವಾದ ಸದ್ದುಗಳನ್ನು ಹೊರಡಿಸುತ್ತಾ, ಸತ್ತವರ ಹಿಂದೆ ಮುಂದೆ ಮಾಡುವಂಥ ಆಕ್ರಂದನಗಳನ್ನು ಮಾಡುತ್ತಾ, ಅಸಹ್ಯಕರ ಮಾತು, ಹಾವಭಾವಗಳನ್ನು ತೋರಿಸುತ್ತಾ...

ಅವರಿಬ್ಬರ ಸಂತೋಷ, ನೆಮ್ಮದಿಯ ಸುಂದರ ವಾತಾವರಣ ಕ್ಷಣಾರ್ಧದಲ್ಲಿ ಕರಗಿ ಹೋಗಿತ್ತು. ಇದ್ದಕ್ಕಿದ್ದಂತೆ ಅದೊಂದು ಬಗೆಯ ಆತಂಕ, ಭಯದ ವಾತಾವರಣ ಅವರಿಬ್ಬರನ್ನೂ ಆಕ್ರಮಿಸಿಕೊಳ್ಳತೊಡಗಿತ್ತು. ಗಾಬರಿಯಿಂದ ಅವರ ಹೆಜ್ಜೆಗಳು ವೇಗ ಕಂಡಿದ್ದವು. ಇವರ ಭಯ, ಆತಂಕಗಳು ಹಿಂದಿನವರ ಹುಚ್ಚನ್ನು ಮತ್ತಷ್ಟು ಕೆರಳಿಸಿತ್ತು. ಅವಳಿಗ್ಯಾಕೋ ಕೋಪ ಕೆರಳಿತ್ತು. ತಾವಿರುವುದು ನಾಗರಿಕ ಜಗತ್ತಿನಲ್ಲಲ್ಲವೆ? ಜಂಗಲ್ ರಾಜ್ ಅಂತೂ ಖಂಡಿತಾ ಅಲ್ಲವಲ್ಲ!

''ಸುಮ್ನೆ ಬಾಯಿ ಮುಚ್ಚಿಕೊಂಡು ಬಾ ಮಹರಾಯಿತಿ.'' ಅವಳ ಕಿವಿ ಬಳಿ ನಡುಗುವ ಧ್ವನಿಯಲ್ಲಿ ಉಸುರುತ್ತಾ ಹೆಚ್ಚು ಕಡಿಮೆ ಅವಳನ್ನು ಎಳೆದುಕೊಂಡು ಓಡಿಯೇ ಓಡಿದ್ದ. ಹುಚ್ಚೆದ್ದ ಕೋತಿಗಳಿಗೆ ಹೆಂಡ ಕುಡಿಸಿದಂತಾಗಿತ್ತು. ಅವರಿಗಿಂತ ವೇಗವಾಗಿ ಓಡಿ ಆ ಗುಂಪು ಅವರನ್ನು ಸುತ್ತುಗಟ್ಟಿತ್ತು.